# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಆಯೋಗ

## ಪತ್ರಿಕಾ ಪ್ರಕಟಣೆ

**2013–14ನೇ ಸಾಲಿನ ವಿದ್ಯುಚ್ಛಕ್ತಿದರ ಪರಿಷ್ಕರಣಾ ವಿವರಗಳು:**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ 2013–14ನೇ ಸಾಲಿನ ಪರಿಷ್ಕೃತ ವಿದ್ಯುಚ್ಛಕ್ತಿ ದರಗಳನ್ನು ಅನುಮೋದಿಸಿ ಘೋಷಿಸಿದೆ. ಈ ಪರಿಷ್ಕೃತ ದರಗಳು 2013–14ನೇ ಸಾಲಿನಲ್ಲಿ ದಿನಾಂಕ:1.5.2013 ಅಥವಾ ನಂತರ ಬರುವ ಮೊದಲನೆಯ ಮೀಟರ್ ಓದುವ ದಿನಾಂಕದಿಂದ ಬಳಕೆಯಾಗುವ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತದೆ.

ಆಯೋಗದ ಅನುಮೋದಿತ ದರವು ರಾಜ್ಯದ ವಿವಿಧ ಗ್ರಾಹಕರಿಗೆ ಪ್ರತಿ ಯುನಿಟ್‌ಗೆ 20ಪೈಸೆಯಿಂದ 30 ಪೈಸೆಯವರೆಗೂ ಹೆಚ್ಚಳಗೊಂಡಿದ್ದು ಸರಾಸರಿ ಹೆಚ್ಚಳ ಪ್ರತಿ ಯೂನಿಟ್‌ಗೆ 23 ಪೈಸೆ ಆಗಿರುತ್ತದೆ. ವಿದ್ಯುತ್ ಸರಬರಾಜು ಕಂಪನಿಗಳು ನೀರಾವರಿ ಪಂಪ್ ಸೆಟ್ ಮತ್ತು ಭಾಗ್ಯಜ್ಯೋತಿ/ಕುಟೀರಜ್ಯೋತಿ ಸ್ಥಾವರಗಳನ್ನು ಹೊರತುಪಡಿಸಿ ಎಲ್ಲಾ ಪ್ರವರ್ಗಗಳಿಗೆ ಕೋರಿದ್ದ ಸರಾಸರಿ ಹೆಚ್ಚಳ ಪ್ರತಿ ಯೂನಿಟ್ಟಿಗೆ 70ಪೈಸೆಗೆ ಪ್ರತಿಯಾಗಿ ಈ ಮೇಲಿನ ದರಗಳನ್ನು ಅನುಮೋದಿಸಲಾಗಿದೆ.

ಗೃಹ ಬಳಕೆಯ ಗ್ರಾಹಕರಿಗೆ ಮಾಹೆಯಾನ 100 ಯೂನಿಟ್‌ಗಳವರೆಗೆ ಮೀರದಂತೆ ಬಳಸುವ ಪ್ರತಿ ಯೂನಿಟ್‌ಗೆ ಹೆಚ್ಚಳ 20 ಪೈಸೆಯೆಂದು ನಿಗದಿಪಡಿಸಲಾಗಿದೆ. 100 ಯೂನಿಟ್‌ಗೆ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ 25 ಪೈಸೆಯಷ್ಟುದರ ಹೆಚ್ಚಳ ನಿಗದಿಪಡಿಸಲಾಗಿದೆ. ನಗರ ಪ್ರದೇಶಗಳಲ್ಲಿನ ಗೃಹ ಬಳಕೆದಾರರಿಗೆ ಮೊದಲ 30 ಯೂನಿಟ್‌ಗಳಿಗೆ ಪ್ರತಿಯೂನಿಟ್‌ಗೆ ರೂ.2.50, 31ರಿಂದ 100 ಯೂನಿಟ್‌ಗಳ ಬಳಕೆಗೆ ಪ್ರತಿಯೂನಿಟ್‌ಗೆ ರೂ.3.70, 101ರಿಂದ 200 ಯೂನಿಟ್‌ಗಳವರೆಗೆ ಪ್ರತಿ ಯೂನಿಟ್‌ಗೆ ರೂ.4.85 ಹಾಗೂ ಅದಕ್ಕೂ ಹೆಚ್ಚಿನ ಬಳಕೆಗೆ ರೂ.5.85ಗಳ ದರ ನಿಗದಿಪಡಿಸಲಾಗಿದೆ.

ಗ್ರಾಮಾಂತರ ಪ್ರದೇಶದ ಗೃಹ ಬಳಕೆದಾರರಿಗೆ ಮೊದಲ 30 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.2.40, 31ರಿಂದ 100 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.3.40, 101ರಿಂದ 200ಯೂನಿಟ್‌ಗಳ ಬಳಕಗೆ ಪ್ರತಿ ಯೂನಿಟ್‌ಗೆ ರೂ.4.55 ಹಾಗೂ ಅದಕ್ಕಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.35ರಂತೆ ನಿಗದಿಪಡಿಸಲಾಗಿದೆ.

ಹೆಚ್.ಟಿ. ಪ್ರವರ್ಗದಲ್ಲಿ ಬರುವ ವಸತಿ ಸಂಕೀರ್ಣಗಳಿಗೆ (Residential Apartments) ಸೇರಿದ ಬಳಕೆದಾರರಿಗೆ ಪ್ರತಿ ಯೂನಿಟ್‌ಗೆದರವನ್ನು ರೂ.4.70ರಿಂದ ರೂ.4.90ಕ್ಕೆ ಹೆಚ್ಚಿಸಲಾಗಿದೆ.

**<u>ವಾಣಿಜ್ಯ ಮತ್ತುಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:</u>**

ರಾಜ್ಯದಲ್ಲಿನ ವಾಣಿಜ್ಯ ಮತ್ತುಕೈಗಾರಿಕಾ ಬಳಕೆದಾರರ ಪ್ರವರ್ಗಗಳಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳನ್ನು ಪ್ರತಿ ಯೂನಿಟ್‌ಗೆ 25ಪೈಸೆಯಂತೆ ಹೆಚ್ಚಿಸಲಾಗಿದೆ.

ಬೆಂಗಳೂರು ನಗರ ಪ್ರದೇಶದ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ 500 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.4.45, ಹಾಗೂ 500 ಯೂನಿಟ್‌ಗಳಿಗಿಂತ ಹೆಚ್ಚಿನ ಬಳಕೆಗೆ ಪ್ರತಿಯೂನಿಟ್‌ಗೆ ರೂ.5.45ರಂತೆ ದರ ನಿಗದಿ ಮಾಡಲಾಗಿದೆ.ಇತರೆ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ 500 ಯೂನಿಟ್ ಬಳಕೆಗೆ ಪ್ರತಿಯೂನಿಟ್‌ಗೆ ರೂ.4.25, 501 ಯೂನಿಟ್‌ನಿಂದ 1000 ಯೂನಿಟ್‌ಗಳವರಗೆ ಪ್ರತಿಯೂನಿಟ್‌ಗೆ ರೂ.4.95 ಹಾಗೂ 1000 ಯೂನಿಟ್‌ಗಿಂತ ಮೇಲ್ಪಟ್ಟ ಬಳಕೆಗೆ ಪ್ರತಿಯೂನಿಟ್‌ಗೆ ರೂ.5.25ರಂತೆ ನಿಗದಿಪಡಿಸಲಾಗಿದೆ.

ಬೆಂಗಳೂರು ಮಹಾನಗರ ಪ್ರದೇಶ ಹಾಗೂ ಇತರೆ ಮಹಾನಗರ ಪ್ರದೇಶಗಳಲ್ಲಿನ ಎಲ್.ಟಿ. ವಾಣಿಜ್ಯ ಬಳಕೆದಾರರಿಗೆ ಮೊದಲ 50 ಯೂನಿಟ್‌ಗಳಿಗೆ ರೂ.6.45 ಹಾಗೂ ನಂತರದ ಬಳಕೆಗೆ ಪ್ರತಿಯೂನಿಟ್‌ಗೆ ರೂ.7.45ರಂತೆ ದರ ನಿಗದಿಪಡಿಸಿದೆ. ಗ್ರಾಮಾಂತರ ಪ್ರದೇಶದಲ್ಲಿನ ವಾಣಿಜ್ಯ ಬಳಕೆದಾರರಿಗೆ ಮೊದಲ 50 ಯೂನಿಟ್‌ಗೆ ಪ್ರತಿಯೂನಿಟ್‌ಗೆ ರೂ.5.95 ಹಾಗೂ ನಂತರದ ಬಳಕೆಗೆ ಪ್ರತಿಯೂನಿಟ್‌ಗೆ ರೂ.6.95 ನೀಡಬೇಕಾಗುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತುಇತರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ 1 ಲಕ್ಷ ಯೂನಿಟ್‌ಗಳ ಬಳಕೆಗೆ ಪ್ರತಿಯೂನಿಟ್‌ಗೆ ರೂ.5.35 ಹಾಗೂ ಅದಕ್ಕಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.75ರಂತೆ ನಿಗದಿಪಡಿಸಿದೆ. ಸಮಾನ ಬಳಕೆಗೆ ಇತರೆ ಪ್ರದೇಶಗಳಲ್ಲಿ ಕ್ರಮವಾಗಿ ಪ್ರತಿ ಯೂನಿಟ್‌ಗೆ ರೂ.5.35 ಹಾಗೂ ರೂ.5.65ರ ದರ ನಿಗದಿಪಡಿಸಿದೆ.

ಬೆಂಗಳೂರು ಹಾಗೂ ಇತರೆ ಮಹಾನಗರ ಪಾಲಿಕೆ ಪ್ರದೇಶಗಳಲ್ಲಿರುವ ಹೆಚ್.ಟಿ.ವಾಣಿಜ್ಯ ಬಳಕೆದಾರರು ಮೊದಲ 2 ಲಕ್ಷ ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.95 ಹಾಗೂ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.25ರಂತೆ ನಿಗದಿಪಡಿಸಿದೆ. ಸಮಾನ ಬಳಕೆಗೆ ಇತರೆ ಪ್ರದೇಶಗಳಲ್ಲಿ ಕ್ರಮವಾಗಿ ಈ ದರವು ಪ್ರತಿ ಯೂನಿಟ್‌ಗೆ ರೂ.6.75 ಹಾಗೂ ರೂ.7.05 ಎಂದು ನಿಗದಿಪಡಿಸಿದೆ.

**<u>ಸರ್ಕಾರದ ಸಹಾಯಧನ:</u>**

2012–13ನೇ ಸಾಲಿನಲ್ಲಿ10 ಹೆಚ್.ಪಿ.ಸಾಮರ್ಥ್ಯದ21.06 ಲಕ್ಷ ಕೃಷಿ ಪಂಪ್‌ಸೆಟ್‌ಗಳಿಗೆ ಹಾಗೂ 22.90 ಲಕ್ಷ ಭಾಗ್ಯಜ್ಯೋತಿ/ಕುಟೀರಜ್ಯೋತಿ ಸಂಪರ್ಕಗಳಿಗಾಗಿ ಆಯೋಗವು ರೂ.4722 ಕೋಟಿ ಸಹಾಯಧನವನ್ನು ನಿಗದಿ ಮಾಡಿತ್ತು ಹಾಗೂ 2013–14ನೆಯ ಸಾಲಿಗೆ ರೂ.5381 ಕೋಟಿಯನ್ನು ನಿಗದಿ ಮಾಡಿದೆ.ಪ್ರತಿ ಪಂಪ್‌ಸೆಟ್‌ನವಾರ್ಷಿಕ ವಿದ್ಯುತ್ ಬಳಕೆ ಹೆಚ್ಚಳದ ಪ್ರಯುಕ್ತಒಟ್ಟು ವಾರ್ಷಿಕ ವಿದ್ಯುಚ್ಛಕ್ತಿ ಬಳಕೆಯು 2012–13ರಲ್ಲಿ 15318 ದಶಲಕ್ಷ ಯೂನಿಟ್‌ಗಳಿಂದ 2013–14ರಲ್ಲಿ 16679 ದಶಲಕ್ಷ ಯೂನಿಟ್‌ಗಳಿಗೆ ಹೆಚ್ಚುವುದೆಂದುಅಂದಾಜು ಮಾಡಿದೆ.

**<u>ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪ:</u>**

ಎಲ್.ಟಿ ಮತ್ತು ಹೆಚ್.ಟಿ.ಪ್ರವರ್ಗಗಳಿಗೆ ಸೇರಿದ ಕುಡಿಯುವ ನೀರು ಸರಬರಾಜು ಬಳಕೆಗೆ ಸಂಬಂದಿಸಿದ ನಗರ ಹಾಗೂ ಗ್ರಾಮೀಣ ಸ್ಥಾವರಗಳಿಗೆ ಯಾವುದೇದರ ಹೆಚ್ಚಳವನ್ನು ಮಾಡದಿರಲು ಆಯೋಗವು ನಿರ್ದರಿಸಿದೆ. ಎಲ್.ಟಿ. ನೀರು ಸರಬರಾಜು ಘಟಕಗಳಿಗೆ ಅನ್ವಯವಾಗುವ ಪ್ರಸಕ್ತದರ ಪ್ರತಿ ಯೂನಿಟ್‌ಗೆ ರೂ.3.20 ಹಾಗೂ ಹೆಚ್.ಟಿ ನೀರು ಸರಬರಾಜು ಘಟಕಗಳಿಗೆ ಪ್ರಸಕ್ತ ರೂ.3.80ಗಳು ಮುಂದುವರಿಯುತ್ತದೆ.ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಬೀದಿ ದೀಪ ಸ್ಥಾವರಗಳಿಗೆ ಅನ್ವಯವಾಗುವದರವನ್ನು ಪ್ರತಿ ಯೂನಿಟ್‌ಗೆ ರೂ.4.20 ರಿಂದ ರೂ.4.45ಕ್ಕೆ ಹೆಚ್ಚಿಸಲಾಗಿದೆ.

**<u>ವಿದ್ಯಾ ಸಂಸ್ಥೆಗಳು ಹಾಗೂ ಆಸ್ಪತ್ರೆಗಳು:</u>**

ಎಲ್.ಟಿ. ಪ್ರವರ್ಗಕ್ಕೆ ಸೇರಿದ ಖಾಸಗಿ ವಿದ್ಯಾಸಂಸ್ಥೆಗಳಿಗೆ ಅನ್ವಯವಾಗುವ ವಿದ್ಯುಚ್ಛಕ್ತಿದರವನ್ನು ಹೆಚ್ಚಿಸದಿರಲು ಆದೇಶಿಸಿದೆ. ಎಲ್.ಟಿ. ಪ್ರವರ್ಗದಲ್ಲಿರುವ ಖಾಸಗಿ ವಿದ್ಯಾ ಸಂಸ್ಥೆಗಳಿಗೆ, ಬೆಂಗಳೂರು ಮತ್ತುಇತರೆ ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ, 200 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.70 ಹಾಗೂ ಅದಕ್ಕಿಂತ ಹೆಚ್ಚಿನ ಬಳಕೆಗೆ ಪ್ರತಿಯೂನಿಟ್‌ಗೆ ರೂ. 6.70ರಂತೆ ದರಅನ್ವಯವಾಗುತಿದ್ದು, ಇತರೆ ಪ್ರದೇಶಗಳಲ್ಲಿ ಸಮಾನ ಬಳಕೆಗೆ ಪ್ರಸಕ್ತದರ ಪ್ರತಿಯೂನಿಟ್‌ಗೆ ರೂ.5.20 ಹಾಗೂ ರೂ.6.20 ಮುಂದುವರಿಯುತ್ತದೆ. ಎಲ್.ಟಿ. ಪ್ರವರ್ಗಕ್ಕೆ ಸೇರಿದ ಖಾಸಗಿ ಆಸ್ಪತ್ರೆಗಳು ಹಾಗೂ ನರ್ಸಿಂಗ್ ಹೋಂಗಳು ಇಲ್ಲಿಯವರೆಗೂ ವಾಣಿಜ್ಯದರವನ್ನು ಪಾವತಿಸುತ್ತಿದ್ದು, ಈ ಬಳಕೆದಾರರಿಗೆ ಮೇಲಿನಂತೆ ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಅನ್ವಯವಾಗುವದರವನ್ನು ವಿಧಿಸಲು ಆದೇಶಿಸಿದೆ.

ಹೆಚ್.ಟಿ ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಖಾಸಗಿ ವಿದ್ಯಾ ಸಂಸ್ಥೆಗಳ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ನೂತನದರ ಪ್ರವರ್ಗವನ್ನು ಜಾರಿಗೆತರಲಾಗಿದೆ. ಈ ಬಳಕೆದಾರರ ಮೊದಲ 1 ಲಕ್ಷಯೂನಿಟ್ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.00 ಹಾಗೂ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.50 ಪಾವತಿಸತಕ್ಕದ್ದು ಮತ್ತು ಮಾಸಿಕ ನಿಗದಿತ ಶುಲ್ಕ (Demand charges) ಪ್ರತಿ ಕೆ.ವಿ.ಎ ಗೆ ರೂ.170.00ನ್ನು ನಿಗದಿಪಡಿಸಿದೆ. ಹೆಚ್.ಟಿ.ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಸರ್ಕಾರಿ ಆಸ್ಪತ್ರೆಗಳು, ಚಾರಿಟೆಬಲ್ ಸಂಸ್ಥೆಗಳು ನಡೆಸುವ ಆಸ್ಪತ್ರೆಗಳು ಹಾಗೂ ಸರ್ಕಾರಿ ವಿದ್ಯಾ ಸಂಸ್ಥೆಗಳು ಮತ್ತುಅನುದಾನಿತ ವಿದ್ಯಾ ಸಂಸ್ಥೆಗಳು ಮೊದಲ 1 ಲಕ್ಷಯೂನಿಟ್ ಬಳಕೆಗೆ ಪ್ರತಿಯೂನಿಟ್‌ಗೆ ರೂ.5.00 ಹಾಗೂ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.50 ದರ ನಿಗದಿಪಡಿಸಿದೆ.

ಹೆಚ್.ಟಿ. ಕೈಗಾರಿಕಾ ಹಾಗೂ ವಾಣಿಜ್ಯ ಗ್ರಾಹಕರು ತಮ್ಮ ಆಯ್ಕೆಯಂತೆ ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸಲ್ಪಡುವ ವಿದ್ಯುಚ್ಛಕ್ತಿಯನ್ನು ಬಳಸಲು ಅವಕಾಶವಿದ್ದು, ಈ ಪ್ರವರ್ಗಕ್ಕೆ ಅನ್ವಯಿಸುವ ಗ್ರೀನ್‌ಟ್ಯಾರೀಫ್ (ಹಸಿರು ದರ) ದರವನ್ನು (ವಿದ್ಯುತ್‌ದರದ ಮೇಲೆ ಹೆಚ್ಚುವರಿ) ಪ್ರಸಕ್ತ ಪ್ರತಿಯೂನಿಟ್‌ಗೆರೂ. 1.00 ರಿಂದ 50 ಪೈಸೆಗೆ ಕಡಿತಗೊಳಿಸಿ ಆದೇಶಿಸಿದೆ.

**<u>ಇಂಧನ ವೆಚ್ಚ ಮರು ಹೊಂದಾಣಿಕೆ ದರಗಳು:</u>**

ಹಿಂದಿನ ದರ ಪರಿಷ್ಕರಣೆ ಆದೇಶದಲ್ಲಿ ಗ್ರಾಹಕರಿಂದ ವಿದ್ಯುತ್‌ದರದಲ್ಲಿ ಇಂಧನ ವೆಚ್ಚಗಳ ಮರು ಹೊಂದಾಣಿಕೆದರವನ್ನು ಸಂಗ್ರಹಿಸಲು ಒಂದು ವ್ಯವಸ್ಥೆಯನ್ನು (mechanism) ಜಾರಿಗೊಳಿಸಲು ಆಯೋಗವು ಆದೇಶಿಸಿತ್ತು. ಅದರಂತೆ ಆಯೋಗವು ಇಂಧನ ವೆಚ್ಚ ಮರುಹೊಂದಾಣಿಕೆ ದರಗಳ ಸಂಗ್ರಹಣೆಕುರಿತು ವಿನಿಮಯಗಳನ್ನು (Regulation) ಈಗಾಗಲೇ ದಿನಾಂಕ: 22.3.2013 ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಿದ್ದು, ಈ ದರಗಳನ್ನು ದಿನಾಂಕ: 1.7.2013 ರಿಂದ ವಿಧಿಸಲು ಅವಕಾಶವಿದೆ.

**<u>ಅಲ್ಪಾವಧಿ ವಿದ್ಯುತ್ ಖರೀದಿ ದರ ಮಿತಿ ನಿಗದಿ ಪಡಿಸುವಿಕೆ:</u>**

ರಾಜ್ಯದಲ್ಲಿನ ವಿದ್ಯುತ್ ಲಭ್ಯತೆಯಲ್ಲಿನ ಅಭಾವದಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳು ಅಲ್ಪಾವಧಿ/ಮಧ್ಯಮಾವಧಿ ಖರೀದಿಗೆ ಮುಂದಾಗಿರುವುದನ್ನು ಆಯೋಗವು ಗಮನಿಸಿದೆ. ಅಲ್ಪಾವಧಿ/ಮಧ್ಯಮಾವಧಿ ಖರೀದಿಯಲ್ಲಿ ಸರಾಸರಿ ದರ 2008–09ರಲ್ಲಿ ಪ್ರತಿ ಯೂನಿಟ್‌ಗೆ ರೂ.6.93 ಪೈಸೆಯಿಂದ 2013ರಲ್ಲಿ ರೂ.4.33ಕ್ಕೆ ಇಳಿಕೆಯಾಗಿದೆ.ಆದರೂ ಸಹ ಖರೀದಿ ಪ್ರಮಾಣವು 2008–09ರಲ್ಲಿ 1293.68 ದಶಲಕ್ಷಯೂನಿಟ್ (ಒಟ್ಟು ವಾರ್ಷಿಕ ಬಳಕೆ 41060.60 ದಶಲಕ್ಷಯೂನಿಟ್‌ನ ಶೇ:3.15) ಇದ್ದದ್ದು 2012–13ರಲ್ಲಿ 7700ದಶಲಕ್ಷಯೂನಿಟ್‌ಗೆ (ವಾರ್ಷಿಕಒಟ್ಟು ಬಳಕೆ ಸುಮಾರು58000 ದಶಲಕ್ಷಯೂನಿಟ್‌ನ ಶೇ:13 ರಷ್ಟು) ಹೆಚ್ಚಳವಾಗಿರುತ್ತದೆ.

ಆಯೋಗವು ಈ ಹಿಂದೆ ನಿಗದಿಪಡಿಸಿದ ಪ್ರತಿ ಯೂನಿಟ್ ಲ್ಪಾವಧಿಖರೀದಿ ದರ ಮಿತಿಯನ್ನು ರೂ.4.00 ರಿಂದ ರೂ.4.50 ಕ್ಕೆ ಹೆಚ್ಚಿಸಿ ಆದೇಶಿಸಿದೆ. ಆಯೋಗ ನಿಗದಿಪಡಿಸಿದ ದರ ಮಿತಿಗಿಂತ ಹೆಚ್ಚಿನದರದಲ್ಲಿ ಖರೀದಿ ಮಾಡುವ ಸಂದರ್ಭದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಈ ಆಯೋಗದ ಪೂರ್ವಬಾವಿ ಅನುಮೋದನೆ ಪಡೆಯತಕ್ಕದ್ದು.

**ವಿದ್ಯುತ್ ಸರಬರಾಜು ಸಂಸ್ಥೆಗಳ 2013–14ಸಾಲಿನ ವಾರ್ಷಿಕ ಅಂದಾಜು ಬೇಡಿಕೆ(ARR-FY–14)**

ವಿದ್ಯುತ್ ಸರಬರಾಜು ಸಂಸ್ಥೆಗಳು 2013–14ನೇ ಸಾಲಿಗೆ ಸಲ್ಲಿಸಿದ ವಾರ್ಷಿಕ ಕಂದಾಯ ಬೇಡಿಕೆ(**ARR**)ಗಳನ್ನು ಕೂಲಂಕುಷವಾಗಿ ಪರೀಶೀಲಿಸಿದ ಆಯೋಗವು ಒಟ್ಟು ರೂ.24469 ಕೋಟಿ ಅಂದಾಜು ಬೇಡಿಕೆಗೆ ಅನುಮೋದನೆ ನೀಡಿದೆ ಹಾಗೂ 49267 ದಶಲಕ್ಷ ಯೂನಿಟ್‌ಗಳ (ವಿದ್ಯುತ್ ಪ್ರಸರಣ ಮತ್ತು ವಿತರಣಾ ನಷ್ಟ ಶೇ 18.92 ಹೊರತುಪಡಿಸಿ) ಸರಬರಾಜು ಮಾಡಲು ಅನುಮೋದನೆ ನೀಡಿದೆ. ಹಿಂದಿನ ವರ್ಷ 2012–13ರ ಸುಮಾರು58000 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಖರೀದಿಗೆ ಎದುರಾಗಿ ಪ್ರಸಕ್ತ 2013–14ನೇ ಸಾಲಿನಲ್ಲಿ 61074 ದಶಲಕ್ಷಯೂನಿಟ್ ವಿದ್ಯುಚ್ಚಕ್ತಿ ಖರೀದಿಗೆ ಆಯೋಗವು ಅನುಮೋದನೆ ನೀಡಿದೆ. ಒಟ್ಟು ವಿದ್ಯುಚ್ಚಕ್ತಿ ಖರೀದಿಯಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಶೇ:50ಕ್ಕಿಂತ ಹೆಚ್ಚಿನ ಪ್ರಮಾಣದ ವಿದ್ಯುಚ್ಛಕ್ತಿ ಅಂದರೆ 24978 ದಶಲಕ್ಷ ಯೂನಿಟ್‌ಗಳನ್ನು ಬಳಸಲಿದೆ ಹಾಗೂ ಈ ಸಂಸ್ಥೆಯ ವಾರ್ಷಿಕ ಕಂದಾಯ ಬೇಡಿಕೆಯನ್ನುರೂ. 12581 ಕೋಟಿಯೆಂದು ನಿಗದಿಪಡಿಸಿದೆ.

**ಇತರೆ ಪ್ರಮುಖ ಅಂಶಗಳು:**

ವಿದ್ಯುಚ್ಛಕ್ತಿ ಖರೀದಿ ದರ ಹೆಚ್ಚಳ ಹಾಗೂ ನಿರ್ವಹಣಾ ವೆಚ್ಚಗಳಲ್ಲಿನ ಹೆಚ್ಚಳದ ಹಿನ್ನೆಲೆಯಲ್ಲಿ ಪರಿಷ್ಕೃತ ವಾರ್ಷಿಕ ಕಂದಾಯ ಬೇಡಿಕೆಗಳನ್ನು (BESCOM, MESCOM, CESC, HESCOM, & GESCOM) ಸರಬರಾಜು ಕಂಪನಿಗಳು ತಮ್ಮ ದಿನಾಂಕ:10.12.2012ರ ಅರ್ಜಿಯಲ್ಲಿ ಮಂಡಿಸಿದ್ದು ಇವರುಗಳ ಕೋರಿಕೆಗೆ ಎದುರಾಗಿ ಆಯೋಗವು ಅನುಮೋದಿಸಿದ ವಾರ್ಷಿಕ ಕಂದಾಯ ಬೇಡಿಕೆ ವಿವರಗಳು ಈ ಕೆಳಕಂಡಂತಿರುತ್ತದೆ.

ರೂ. ಕೋಟಿಗಳಲ್ಲಿ.

| ವಿದ್ಯುತ್ ಸರಬರಾಜು ಕಂಪನಿ | FY-14 (2013-14) | |
|---|---|---|
| | ಪ್ರಸ್ತಾವಿತ | ಅನುಮೋದಿತ |
| ಬೆಸ್ಕಾಂ | 13513 | 12581 |
| ಮೆಸ್ಕಾಂ | 2188 | 2031 |
| ಸೆಸ್ಕ್ | 2743 | 2544 |
| ಹೆಸ್ಕಾಂ | 4383 | 4331 |
| ಜೆಸ್ಕಾಂ | 3193 | 2982 |
| **ಒಟ್ಟು** | **26021** | **24469** |

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ 2013-14ಕ್ಕೆ ಅನ್ವಯವಾಗುವ ವಿದ್ಯುತ್ ಪ್ರಸರಣದರನಿಗದಿ:**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು 2013-14ರ (FY-14) ಸಾಲಿಗಾಗಿ ರೂ.2699 ಕೋಟಿ ವಾರ್ಷಿಕ ಕಂದಾಯ ಬೇಡಿಕೆ ಮಂಡಿಸಿದ್ದು ಇದರಲ್ಲಿ 2012-13ನೇ ಸಾಲಿನ (FY -13) ರೂ.293ಕೋಟಿ ಕಂದಾಯಕೊರತೆ ಸಹಾ ಒಳಗೊಂಡಿರುತ್ತದೆ. ಅರ್ಜಿಯ ವಿವರವಾದ ಪರಿಶೀಲನೆಯ ನಂತರ ಆಯೋಗವು 2013-14ಕ್ಕೆ ರೂ.2183 ಕೋಟಿ ವಾರ್ಷಿಕ ಕಂದಾಯ ಬೇಡಿಕೆಯನ್ನು ಅನುಮೋದಿಸಿದೆ ಹಾಗೂ ಪ್ರಸರಣಾ ದರವನ್ನು ಪ್ರತಿ ಮೆಗಾವಾಟ್‌ಗೆ ಪ್ರತಿ ತಿಂಗಳಿಗೆ ರೂ.95442 ಎಂದು ನಿಗದಿಪಡಿಸಿದೆ. ವಿದ್ಯುತ್ ಸರಬರಾಜು ಸಂಸ್ಥೆಗಳಿಗೆ ಆಯೋಗ ಅನುಮೋದಿಸಿರುವ ವಿದ್ಯುತ್ ಖರೀದಿ ದರದಲ್ಲಿ ಈ ಮೇಲ್ಕಂಡ ವಿದ್ಯುತ್ ಪ್ರಸರಣದರವು ಒಳಗೊಂಡಿದೆ.

*****

**ಟಿಪ್ಪಣಿ: ಪ್ರತಿ ಬಳಕೆದಾರರ ಪ್ರವರ್ಗಕ್ಕೆ ಸಂಬಂಧಿಸಿದ ಪರಿಷ್ಕೃತ ವಿದ್ಯುತ್‌ದರ ವಿವರಗಳನ್ನು ಈ ಪತ್ರಿಕಾ ಪ್ರಕಟಣೆಯೊಂದಿಗೆ ಲಗತ್ತಿಸಿದೆ. ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ವಾರ್ಷಿಕದರ ಪರಿಷ್ಕರಣಾಆದೇಶದ ಸಂಪೂರ್ಣ ವಿವರಗಳನ್ನು ಆಯೋಗದ ವೆಬ್‌ಸೈಟ್WWW. kerc.org ನಲ್ಲಿ ಪ್ರಕಟಿಸಲಾಗಿದೆ**

.